ಹಿಂದಿನ ದಿನಗಳಲ್ಲಿ ಆ ದಿನಾಂಕದಿಂದ ಮೂರು ವರ್ಷದೊಳಗೆ ಎಲ್ಲವನ್ನೂ, 4(1) notification ಮಾಡಿ ಮುಗಿಸಬೇಕಾಗಿತ್ತು. ಬೇರೆ ಬೇರೆ ಕಾರಣಗಳಿಂದ ಅಲ್ಲಿರುವ ಗೊಂದಲಗಳಿಂದ ಅಲ್ಲಿ ಮಾಡಲು ಆಗಲಿಲ್ಲ. ಈಗಾಗಲೇ ಅಲ್ಲಿನ ಉಸ್ತುವಾರಿ ಸಚಿವರು ಹಾಗೂ ಬಾಕಿಯವರು ಸೇರಿಕೊಂಡು ಅದನ್ನು finalize ಮಾಡಿದ್ದಾರೆ. ಈಗ ತಕ್ಷಣ ಅದನ್ನು 4(1), 6(1) notification ಮಾಡಿ land acquisition Act ಪ್ರಕಾರ ಅಲ್ಲಿನ emergency clause ಅನ್ನು ತೆಗೆದುಕೊಂಡು ತಕ್ಷಣ ಪರಿಹಾರ ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ : ಎಷ್ಟು ತಿಂಗಳಿನಲ್ಲಿ ಮುಗಿಸಿಕೊಡುತ್ತೀರಿ ಎನ್ನುವ ಭರವಸೆಯನ್ನು ಕೊಡಬೇಕು.

ಶ್ರೀ ಡಿ.ವಿ. ಸದಾನಂದಗೌಡ : ಆದಷ್ಟು ಶೀಘ್ರವಾಗಿ ಮಾಡುತ್ತೇವೆ.

ಅಧ್ಯಕ್ಷರು : ಆದಷ್ಟು ಬೇಗ ಮಾಡುತ್ತಾರೆ.

ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ : ಮಾನ್ಯ ಮುಖ್ಯಮಂತ್ರಿಗಳೇ ಈಗಾಗಲೇ 4 ವರ್ಷಗಳು ಕಳೆದುಹೋಗಿದೆ.

ಶ್ರೀ ಡಿ.ವಿ. ಸದಾನಂದಗೌಡ : ಈಗ ಅದನ್ನು ಜಿಲ್ಲಾ ಉಸ್ತುವಾರಿ ಮಂತ್ರಿಗಳು ಹಾಗೂ ನೀವೆಲ್ಲಾ ಸೇರಿಕೊಂಡು ಸ್ವಲ್ಪ ಸಮಾಧಾನ ಮಾಡಿರುವುದು ನಮ್ಮ ಗಮನಕ್ಕೆ ಬಂದಿದೆ. ಆದಷ್ಟು ಶೀಘ್ರವಾಗಿ ಒಂದು ವರ್ಷದೊಳಗೆ ಅದನ್ನು ಪೂರ್ಣಗೊಳಿಸುವಂತಹ ಕೆಲಸಕಾರ್ಯವನ್ನು ಮಾಡುತ್ತೇವೆ.

ತಡೆಹಿಡಿಯಲಾದ ಪ್ರಶ್ನೆಗಳು (4ನೇ ಪಟ್ಟಿ)

ಬಡಾವಣೆ ನಿರ್ಮಾಣಕ್ಕೆ ಭೂಸ್ವಾಧೀನ

48 (22) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ):– ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಆಗಿನ ಚಿಕ್ಕೋಡಿ ಪಟ್ಟಣ ಪಂಚಾಯಿತಿಯು ಪಟ್ಟಣದ ರಿ. ಸರ್ವೆ ನಂ. 33/1 ರಲ್ಲಿ ಬಡಾವಣೆ ನಿರ್ಮಿಸುವ ಸಲುವಾಗಿ 5.30 ಎಕರೆ ಸ್ವಾಧೀನ ಪಡಿಸಿಕೊಂಡಿದ್ದು ಯಾವಾಗ; ನಿಗದಿ ಪಡಿಸಿದ ಪರಿಹಾರ ಮೊತ್ತವೆಷ್ಟು;

ಅ) ಈ ಭೂಮಿಯು ಯಾರ ಸ್ವಾಧೀನದಲ್ಲಿತ್ತು; ಭೂಸ್ವಾಧೀನಕ್ಕೆ ಟೆನೆಂಟ್ಸ್ ಸಮ್ಮತಿಯಿತ್ತೇ; ಇಲ್ಲದಿದ್ದರೆ, ಭೂ ಮಾಲೀಕರು ಹಾಗೂ ಟೆನೆಂಟ್ಸ್ ನಡುವೆ ಪ್ರಕರಣ ದಾಖಲಾಗಿತ್ತೇ; ಆಗಿದ್ದರೆ, ಯಾವ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದೆ;

ಇ) ಯಾವಾಗ ಪರಿಹಾರ ಧನವನ್ನು ವಿತರಿಸಲಾಯಿತು; ಈ ಭೂಮಿಯ ಮೂಲ ಮಾಲೀಕರಿಗೆ ಪರಿಹಾರ ಧನ ವಿತರಿಸಲಾಗಿದೆಯೇ; ಇಲ್ಲವಾದಲ್ಲಿ, ಕಾರಣಗಳೇನು?

ಈ) ಚಿಕ್ಕೋಡಿ ಪುರಸಭೆಗೆ 2007–08ನೇ ಸಾಲಿನಲ್ಲಿ ಬಿಡುಗಡೆಯಾದ ಒಟ್ಟು ಎಸ್.ಎಫ್.ಸಿ. ಅನುದಾನವೆಷ್ಟು; ಎಸ್.ಎಫ್.ಸಿ. ಅನುದಾನ ಬಳಕೆಗೆ ಸರ್ಕಾರವು ಅಳವಡಿಸಿಕೊಂಡಿರುವ ಮಾನದಂಡಗಳೇನು; ಈ ಮಾನದಂಡಗಳನ್ನು ಉಲ್ಲಂಘಿಸಿ ಎಸ್.ಎಫ್.ಸಿ. ಅನುದಾನವನ್ನು ಪರಿಹಾರ ಧನವಾಗಿ ವಿತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರವು ಕೈಗೊಂಡ ಕ್ರಮಗಳೇನು;

ಉ) ಒಮ್ಮೆ ಪರಿಹಾರ ಧನವನ್ನು ವಿತರಿಸಿದ ನಂತರ ಪುನಃ ಅನೇಕ ವರ್ಷಗಳು ಕಳೆದ ನಂತರ ಪುನಃ ಪರಿಹಾರ ಧನವನ್ನು ವಿತರಿಸಿ ತಪ್ಪೆಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ತಪ್ಪಿತಸ್ಥರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು):–

ಅ) ಚಿಕ್ಕೋಡಿ ಪಟ್ಟಣದ ರಿ. ಸರ್ವೆ ನಂ. 33/1ರಲ್ಲಿ, 33/1ಎ ಮತ್ತು 33/1ಬಿ ಎಂದು ಎರಡು ಹಿಸ್ಸೆಗಳಾಗಿವೆ. ರಿ. ಸರ್ವೆ ನಂ. 33/1ಎ ಇದಕ್ಕೆ ಸಂಬಂಧಿಸಿದಂತೆ ಐತೀರ್ಪು ಘೋಷಣೆ ಮಾಡಿ ದಿನಾಂಕ 18.10.1978 ರಂದು ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ನಿಗದಿ ಪಡಿಸಿದ ಪರಿಹಾರ ಧನ ರೂ. 9,930.25.

ಚಿಕ್ಕೋಡಿಯ ಮಾನ್ಯ ಸಿವಿಲ್ ನ್ಯಾಯಾಲಯದ (ಹಿರಿಯ ಶ್ರೇಣಿ) ಇವರಿಂದ ಎಲ್ಎಸಿ ಸಂಖ್ಯೆ: 01/2000ರಲ್ಲಿ ದಿನಾಂಕ 08.12.2004ರಂದು ನೀಡಿದ ತೀರ್ಪಿನ ಮೇರೆಗೆ ಕಲಂ 28(ಎ)ರಡಿಯ ಅರ್ಜಿಯಲ್ಲಿ ಹೆಚ್ಚುವರಿ ಪರಿಹಾರ ಧನ ರೂ. 82,22,407/ ಗಳನ್ನು ನಿಗದಿ ಪಡಿಸಿದೆ.

ಆ) ಈ ಭೂಮಿಯು ಗೇಣಿದಾರನ ಸ್ವಾಧೀನದಲ್ಲಿತ್ತು.

ಸ್ವಾಧೀನಕ್ಕೆ ಟೆನೆಂಟ್ಸ್ ಒಪ್ಪಿಗೆ ಇಲ್ಲದ ಕಾರಣ ಭೂಮಿಯನ್ನು ಭೂ ಸ್ವಾಧೀನ ಕಾಯ್ದೆ 1894ರಡಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಭೂ ಮಾಲೀಕರು ಮತ್ತು ಟೆನೆಂಟ್ಸ್ ನಡುವೆ ಪ್ರಕರಣ ದಾಖಿಲಾಗಿತ್ತು.

ಭೂ ನ್ಯಾಯ ಮಂಡಳಿ, ಚಿಕ್ಕೋಡಿ ಇವರಲ್ಲಿ ಪ್ರಕರಣ ಸಂಖ್ಯೆ: ಕೆ.ಎಲ್.ಆರ್/ ಎಸ್.ಆರ್/19ರಡಿ ದಾಖಿಲಾಗಿತ್ತು.

ಇ) ದಿನಾಂಕ 20.09.2006ರಂದು ಕಲಂ 28(ಎ)ರಡಿ ಐತೀರ್ಮ ರಚಿಸಿ ಅರ್ಹ ಭೂ ಮಾಲೀಕರಿಗೆ ದಿನಾಂಕ 28.02.2008 ಮತ್ತು ದಿನಾಂಕ 30.05.2008ರಂದು 2 ಕಂತುಗಳಲ್ಲಿ ಪರಿಹಾರ ಧನವನ್ನು ಸಂದಾಯಿಸಲಾಗಿದೆ.

ಈ ಭೂಮಿಯ ಮೂಲ ಮಾಲೀಕರಿಗೆ ಪರಿಹಾರ ಧನ ವಿತರಿಸಲಾಗಿಲ್ಲ, ಕಾರಣವೇನೆಂದರೆ, ಚಿಕ್ಕೋಡಿ ಭೂ ನ್ಯಾಯ ಮಂಡಳಿಯ ಪ್ರಕರಣ ಸಂಖ್ಯೆ: ಕೆ.ಎಲ್.ಆರ್/ ಎಸ್.ಆರ್/ಚಿಕ್ಕೋಡಿ–19, ದಿನಾಂಕ 17.10.1981ರ ಮೇರೆಗೆ ರಿ.ಸ. ನಂ. 33/1ಎ ಕ್ಷೇತ್ರಕ್ಕೆ ಅರ್ಜಿದಾರ ಶ್ರೀ ಲಾಡ ಜಿ ಅಲ್ಲಾ ಮುಲ್ತಾನಿ ಇವರನ್ನು ಅನುಭೋಗದಾರರು ಎಂದು ಘೋಷಿಸಲಾಗಿದೆ. ಸದರಿ ಯವರಿಗೆ ತಹಶೀಲ್ದಾರ್, ಚಿಕ್ಕೋಡಿ ಇವರು 1982ನೇ ಸಾಲಿನ ಮೇ ತಿಂಗಳಿನಲ್ಲಿ ನಮೂನೆ–10ನ್ನು ನೀಡಲಾಗಿದ್ದರ ಮೇರೆಗೆ ಸದರಿಯವರು ಜಮೀನಿನ ಪರಿಹಾರ ಧನವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

ಈ) 2007–08ನೇ ಸಾಲಿನಲ್ಲಿ ಒಟ್ಟು ರೂ. 221.72 ಲಕ್ಷ ಎಸ್.ಎಫ್.ಸಿ. ಅನುದಾನ ಬಿಡುಗಡೆಯಾಗಿದ್ದು, ಕ್ರಿಯಾಯೋಜನೆಯನ್ನು ಮಾರ್ಗಸೂಚಿರನ್ವಯ ಮಂಜೂರಾತಿ ನೀಡಲಾಗಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 186 ಜಿಇಎಲ್ 2007, ದಿನಾಂಕ 16.06.2007ರಲ್ಲಿ 2007–08ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಮುಕ್ತನಿಧಿ ಅನುದಾನದ ಹಂಚಿಕೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಚಿಕ್ಕೋಡಿ ಪುರಸಭೆ ಇವರು ಬಡಾವಣೆ ನಿರ್ಮಾಣಕ್ಕಾಗಿ ಭೂ ಸ್ವಾಧೀನ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ ಹೆಚ್ಚುವರಿ ಪರಿಹಾರ ಧನವನ್ನು ಠೇವಣಿ ಮಾಡಲು ಚಿಕ್ಕೋಡಿ ಪುರಸಭೆಯ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದೇ ಇರುವುದರಿಂದ

ದಿನಾಂಕ 20.12.2007 ಮತ್ತು ದಿನಾಂಕ 11.03.2008ರ ಆದೇಶ ಸಂಖ್ಯೆ: ನಆಇ 70 ಎಸ್.ಎಫ್.ಸಿ 2007ರನ್ವಯ ರೂ. 82,22,407/–ಗಳನ್ನು ಬಿಡುಗಡೆ ಮಾಡಲಾಗಿದ್ದು, ಈ ಮೊತ್ತವನ್ನು ಉಪ ವಿಭಾಗಾಧಿಕಾರಿಗಳಿಗೆ ಚೆಕ್ ಮೂಲಕ ವಿತರಿಸಲಾಗಿದೆ.

ಊ) ಮೊದಲ ಪರಿಹಾರ ಧನವನ್ನು ಪಡೆಯದೆ ಇರುವುದರಿಂದ ವಿತರಿಸಿರುವುದಿಲ್ಲ.

ಮಾನ್ಯ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ), ಚಿಕ್ಕೋಡಿ ಇಲ್ಲಿ ಎಲ್ಎಸಿ ನಂ. 01/2000ರಲ್ಲಿನ ದಿನಾಂಕ 08.12.2004ರ ಡಿಕ್ರಿ ಮೇರೆಗೆ ಸಲ್ಲಿಸಲಾದ ಭೂ ಸ್ವಾಧೀನ ಕಾಯ್ದೆ ಕಲಂ 28(ಎ)ರಡಿಯಲ್ಲಿ ಅರ್ಜಿಯಲ್ಲಿ ಇದೇ ಮೊದಲ ಬಾರಿಗೆ ಹೆಚ್ಚುವರಿ ಪರಿಹಾರ ಧನವನ್ನು ಗೇಣಿದಾರನಿಗೆ ವಿತರಿಸಲಾಗಿದೆ. ಈ ಪರಿಹಾರ ಧನ ವಿತರಣೆಯಲ್ಲಿ ಯಾವುದೇ ತಪ್ಪು ಎಸಗಿರುವುದಿಲ್ಲ. ಮಾನ್ಯ ಸಿವಿಲ್ ನ್ಯಾಯಾಲಯದ ತೀರ್ಪಿನ ಪ್ರಕಾರ ಹೆಚ್ಚುವರಿ ಪರಿಹಾರ ಧನವನ್ನು ವಿತರಿಸಲಾಗಿದೆ. ಈ ಹಿನ್ನೆಲೆಯಲ್ಲಿ, ತಪ್ಪಿತಸ್ಥರ ವಿರುದ್ಧ ಕ್ರಮವಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ಸರಿಯಾದ ಮಾಹಿತಿಯನ್ನು ನಮಗೆ ನೀಡಿಲ್ಲ. 1978ರಲ್ಲಿ ಚಿಕ್ಕೋಡಿ ಪಟ್ಟಣದಲ್ಲಿ ಬಡಾವಣೆಗಳಿಗಾಗಿ ಭೂ ಸ್ವಾಧೀನ ಮಾಡಲು 12 ಎಕರೆ ಜಮೀನನ್ನು Assistant Commissioner ರವರ ಮೂಲಕ ಭೂ ಸ್ವಾಧೀನ ಮಾಡಿಕೊಂಡರು. ಟೆನೆಂಟ್ ಇರುವುದರಿಂದ ಆ ಜಮೀನನ್ನು ಭೂ ಸ್ವಾಧೀನ ಮಾಡಲು ಆಗಲಿಲ್ಲ. ಆಗ ಟೆನೆಂಟ್‌ನವರು ಹೈಕೋರ್ಟ್‌ಗೆ ಅಪೀಲ್ ಹೋದರು. ಇತ್ಯರ್ಥವಾಗುವವರೆಗೆ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳಬಾರದೆಂದು, ಹೈಕೋರ್ಟ್‌ನಲ್ಲಿ ಸುಮಾರು 10 ವರ್ಷ ಪೆಂಡಿಂಗ್ ಇಟ್ಟು ಮತ್ತೆ ಭೂಸ್ವಾಧೀನ ಮಾಡಲು Assistant Commissioner ಗೆ remand ಆಗಿ ಚಿಕ್ಕೋಡಿ ಕೋರ್ಟ್ ಬಂದಿತು. ಆಗ Assistant Commissioner ನವರು ಇದ್ದವರು ಆ ಜಮೀನಿನ ಕಿಮ್ಮತ್ತನ್ನು, ಕೇವಲ 12 ಎಕರೆ ಜಮೀನಿನ ಕಿಮ್ಮತ್ತನ್ನು 20,000 ರೂಪಾಯಿಗೆ ಮಾತ್ರ ಮಾಡಿದರು. ಆದರೆ ಇವತ್ತು ಆ ಜಮೀನಿನ ಕಿಮ್ಮತ್ತನ್ನು ಸುಮಾರು 86 ಲಕ್ಷ ರೂಪಾಯಿಗೆ ಮಾಡಿ ನಮ್ಮ SFC ಅನುದಾನದಿಂದ ಹಾಗೂ ಮುಕ್ತ ನಿಧಿ ಹಣದಿಂದ ಹಣವನ್ನು ಭರಿಸಿದ್ದಾರೆ. ಆದರೆ ಸರ್ಕಾರ ಇವತ್ತು ಒಂದು ಆದೇಶದಲ್ಲಿ ಮುಕ್ತ ನಿಧಿ ಮತ್ತು SFC grant ಅನ್ನು developmental ಕಾಮಗಾರಿಗಾಗಿ ಮಾತ್ರ ಬಳಸಬೇಕೆಂದು ಆದರೆ ಭೂಸ್ವಾಧೀನಕ್ಕಾಗಿ ಆ ಹಣವನ್ನು ಬಳಕೆ ಮಾಡಬಾರದೆಂದು ಸ್ಪಷ್ಟವಾಗಿ ಒಂದು ಆದೇಶ ಇರುವುದರಿಂದ ಈ ಹಣವನ್ನು

ಭೂಸ್ವಾಧೀನ ಮಾಡಲು ಅವರಿಗೆ ಕೊಡಲು ಬರುವುದಿಲ್ಲ. ಇದು ಕಂದಾಯ ಇಲಾಖೆಗೆ ಬರುವುದರಿಂದ ಇದಕ್ಕೆ ಕಂದಾಯ ಇಲಾಖೆಯವರು ಹಣವನ್ನು ಕೊಡಬೇಕಾಗುತ್ತದೆ. ಈ ಹಣವನ್ನು ಪುರಸಭೆಯವರು ಪಾವತಿ ಮಾಡುವುದಕ್ಕೆ ಬರುವುದಿಲ್ಲ. ಇದರ ಬಗ್ಗೆ ಸಂಪೂರ್ಣವಾದ ತನಿಖೆಯಾಗಬೇಕೆಂದು ನಿಮ್ಮ ಮುಖಾಂತರ ಕಳಕಳಿಯಿಂದ ವಿನಂತಿಯನ್ನು ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರ ಹೇಳುವುದಕ್ಕೆ ತಾವು ಅವಕಾಶವನ್ನು ಕೊಡಬೇಕು.

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಸದಸ್ಯರು ಎರಡು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. SFC ಅನುದಾನದಲ್ಲಿ ಭೂ ಖರೀದಿಗೆ ಪುರಸಭೆಯವರು ಪಾವತಿ ಮಾಡಿಸಿದ್ದಾರೆನ್ನುವಂತಹ ವಿಷಯವನ್ನು ಹೇಳಿದ್ದಾರೆ. ಎರಡನೆಯ ವಿಷಯವೆಂದರೆ ಲ್ಯಾಂಡ್ ಅಕ್ವಿಜಿಷನ್ ಮಾಡಿದ್ದಾರೆ, ಅದನ್ನು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ಲ್ಯಾಂಡ್ ಅಕ್ವಿಜಿಷನ್ ಮಾಡುವಂತಹ ಪದ್ಧತಿಯು ಪುರಸಭೆಯಲ್ಲಿರುವುದಿಲ್ಲವಾದ ಕಾರಣ ಅದನ್ನು ರೆವಿನ್ಯೂ ಇಲಾಖೆಯವರ ಮುಖಾಂತರ ಲ್ಯಾಂಡ್ ಅಕ್ವಿಜಿಷನ್ ಮಾಡಿಸಿದ್ದಾರೆ. ಹಣವನ್ನು ಕೋರ್ಟಿನ ಆದೇಶದ ಪ್ರಕಾರ ಪುರಸಭೆಯವರಿಗೆ ಪಾವತಿಯನ್ನು ಮಾಡಲಾಗಿದೆ. SFC ಹಣದಲ್ಲಿ ಅವರಿಗೆ ಹಣವನ್ನು ಕೊಟ್ಟಿದ್ದಾರೆ ಇದು ತಪ್ಪೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. SFC ಅನುದಾನದಲ್ಲಿ ಈ ಜಮೀನಿಗೆ ಹಣವನ್ನು ಕೊಡಬೇಕೆಂದು ಸರ್ಕಾರವು ಒಂದು ಆದೇಶವನ್ನು ಮಾಡಿದೆ. ಆ ಆದೇಶದ ಪ್ರಕಾರ ಪುರಸಭೆಯವರು ಅಲ್ಲಿ ಹಣವನ್ನು ಪಾವತಿ ಮಾಡಿದ್ದಾರೆ. ಅದು ಲ್ಯಾಂಡ್ ಅಕ್ವಿಜಿಷನ್ ಇರಬಹುದು, ಹಣ ಕೊಟ್ಟಿರುವಂತಹ ವಿಚಾರ ಇರಬಹುದು ನಾವು ಕೋರ್ಟಿನ ಆದೇಶದ ಮೇರೆಗೆ ಮಾಡಿದ್ದೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಇದು ಕಂದಾಯ ಇಲಾಖೆಗೆ ಸೇರಿರುವಂತಹ ರೆವಿನ್ಯೂ ಲ್ಯಾಂಡ್ ಆಗಿದೆ.

ಅಧ್ಯಕ್ಷರು : ಮಾನ್ಯ ಸಚಿವರು ಈ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : SFC Grants ಬಗ್ಗೆ ಈ ಹಣವನ್ನು ಬೇರೆ ಕಾಮಗಾರಿಯ ಕೆಲಸಕ್ಕೆ ಉಪಯೋಗಿಸಬಾರದು ಎಂದು ಇಲ್ಲಿ ಸ್ಪಷ್ಟವಾದಂತಹ

Government Order ಇದೆ. Government Order ಎಲ್ಲಿದೆ? Development ಎಲ್ಲವೂ ನಿಂತುಹೋಗುತ್ತದೆ. ಈ ತರಹ ಜಮೀನನ್ನು ತೆಗೆದುಕೊಳ್ಳುವುದಕ್ಕೆ ಹಣವನ್ನು ಖರ್ಚು ಮಾಡಿದರೆ ಆ ಪಟ್ಟಣ ಪಂಚಾಯಿತಿಯು ಹೇಗೆ ಸುಧಾರಣೆಯಾಗುತ್ತದೆ? ಅಲ್ಲಿ ಗಟಾರ ಹೇಗೆ ಹೋಗಬೇಕು, ರಸ್ತೆಗಳು ಹೇಗೆ ಆಗಬೇಕು, ತಾವು ಏನು ಮಾಹಿತಿಯನ್ನು ಒದಗಿಸಿದ್ದೀರಿ ಈ ಬಗ್ಗೆ ದಯವಿಟ್ಟು ಒಂದು ತನಿಖೆಯು ಆಗಬೇಕು. ಅಲ್ಲಿ ಏನೇನು ಆಗಿದೆ ಎಂಬುದರ ಬಗ್ಗೆ ನಾನು ಸಂಪೂರ್ಣವಾದಂತಹ ಮಾಹಿತಿಯನ್ನು ಕೊಡುತ್ತೇನೆ. ಈ ರೀತಿಯಾಗಿ ತರಾತುರಿಯಲ್ಲಿ ಮಾಡಿದರೆ ಆಗುವುದಿಲ್ಲ. Assistant Commissioner ರವರು ಪುರಸಭೆಯ ಸದಸ್ಯರಿಗೆ ಒಂದು ಪತ್ರವನ್ನು ಬರೆದಿದ್ದಾರೆ. "ನೀವು ಈ ಹಣವನ್ನು ಬೇಗನೆ ಕೊಡಲಿಲ್ಲವೆಂದರೆ ನಿಮ್ಮ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ" ಎಂದು ಒಂದು ಲೆಟರನ್ನು ಎ.ಸಿ.ಯವರು ಕಳುಹಿಸುತ್ತಾರೆ.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರವನ್ನು ಹೇಳಲಿ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ : SFC ಹಣ ಬೇರೆ ಕಾಮಗಾರಿಗಳಿಗೆ use ಮಾಡುವುದಕ್ಕೆ ಸಾಕಾಗುವುದಿಲ್ಲ. ಅದರಲ್ಲಿ ಹಣವನ್ನು ಕೊಟ್ಟರೆ ಇಲ್ಲಿ ಕೊರತೆಯಾಗುತ್ತದೆನ್ನುವಂತಹ ಪ್ರಶ್ನೆ ಅವರದಾಗಿದೆ. ಅದನ್ನು ಅಡಿಷನಲ್ ಆಗಿ ಕೊಡುವುದಕ್ಕೆ ತಾವು ಹೇಳಬೇಕು. ಭೂಮಿಗೆ ಹಣವನ್ನು ಅಡಿಷನಲ್ ಆಗಿ ಕೊಟ್ಟರೆ problem solve ಆಗುತ್ತದೆ.

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ : ಈ ವಿಚಾರದಲ್ಲಿ ತನಿಖೆಯಾಗಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. Land acquisition ಅನ್ನು Revenue Department ನವರು ಮಾಡುವಂತಹ ಪದ್ಧತಿ ಇರುವುದರಿಂದ ನಾವು ಜಿಲ್ಲಾಧಿಕಾರಿಯವರಿಂದ ಒಂದು ವರದಿಯನ್ನು ತರಿಸಿಕೊಳ್ಳುತ್ತೇವೆ. ಅದು ಬಂದ ನಂತರ SFC ಅನುದಾನದಲ್ಲಿ ಅವ್ಯವಹಾರಗಳು ಆಗಿದ್ದರೆ ನಾವು ಪೌರಾಡಳಿತ ಇಲಾಖೆಯಿಂದ ನೇರವಾಗಿ ತನಿಖೆಯನ್ನು ಮಾಡಿಸುತ್ತೇವೆ. ರೆವಿನ್ಯೂ ಇಲಾಖೆಯಿಂದ ಆ ತರಹ ಏನಾದರೂ ಆಗಿದ್ದರೆ ಸನ್ಮಾನ್ಯ ಮುಖ್ಯಮಂತ್ರಿಗಳು ರೆವಿನ್ಯೂ ಇಲಾಖೆಯ ಖಾತೆ ಹೊಂದಿರುವುದರಿಂದ ಅವರ ಸಹಮತಿಯನ್ನು ತೆಗೆದುಕೊಂಡು ಒಂದು ವರದಿಯನ್ನು ತರಿಸಿಕೊಂಡು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ.

ಅಧ್ಯಕ್ಷರು : ಆಯಿತು.